ನಬಾರ್ಡ್ ಯೋಜನೆ

1814(2101); ಶ್ರೀ ಅಶೋಕ್ ಆರ್. (ಪದ್ಮನಾಭನಗರ)

ಅ) ಬೆಂಗಳೂರು ನಗರ ಜಿಲ್ಲೆಗೆ ದಿನಾಂಕ 01–07–2013 ರಿಂದ ಇಲ್ಲಿಯವರೆಗೆ ನಬಾರ್ಡ್ ಯೋಜನೆ, ಸಿ.ಆರ್.ಎಫ್ ಮತ್ತು ಎಸ್.ಸಿ.ಪಿ. ಟಿ.ಎಸ್.ಪಿ. ಹಾಗೂ ಕೆ.ಆರ್.ಡಿ.ಸಿ.ಎಲ್‌ಗಳಲ್ಲಿ ವಿಧಾನಸಭಾ ಕ್ಷೇತ್ರವಾರು ಬಿಡುಗಡೆ ಮಾಡಿದ ಅನುದಾನದ ವಿವರ ನೀಡುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ಗ್ರಾಮಾಂತರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕ್ಷೇತ್ರ	01–07–2013 ರಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನದ ವಿವರ (ಲಕ್ಷ ರೂಗಳಲ್ಲಿ)				
		ನಬಾರ್ಡ್	ಸಿ.ಆರ್.ಎಫ್	ಎಸ್.ಸಿ.ಪಿ.	ಟಿ.ಎಸ್.ಪಿ.	ಕೆ.ಆರ್.ಡಿ.ಸಿ.ಎಲ್
1	ಯಲಹಂಕ	100.00	–	314.02	21.58	––
2	ಯಶವಂತಪುರ	100.00	850.00	233.42	31.59	––
3	ಬೆಂಗಳೂರು (ದಕ್ಷಿಣ)	––	–	355.51	0.48	––
4	ಆನೇಕಲ್	100.00	400.00	466.24	37.89	––
5	ಮಹದೇವಪುರ	––	200.00	––	––	––

ಭೂಮಿಯೊಳಗೆ ವಿದ್ಯುತ್ ಕೇಬಲ್

1815(2102); ಶ್ರೀ ಅಶೋಕ ಆರ್. (ಪದ್ಮನಾಭ ನಗರ)

ಅ) ಬೆಂಗಳೂರು ನಗರದಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗವನ್ನು ಭೂಗತ ಕೇಬಲ್ ಆಗಿ ಪರಿವರ್ತಿಸುವ ಪ್ರಸ್ತಾವನೆ ಸಂಪೂರ್ಣವಾಗಿ ಜಾರಿಗೆ ಬರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿದ್ಯುತ್ ಮಾರ್ಗವು ಹಾದು ಹೋಗಿರುವುದರಿಂದ ಎಷ್ಟು ಮನೆಗಳಿಗೆ ತೊಂದರೆಯಾಗಿದೆ ಹಾಗೂ ಎಷ್ಟು ಜನ ವಿದ್ಯುತ್ ಸ್ಪರ್ಷದಿಂದ ಸಾವನ್ನಪ್ಪಿರುತ್ತಾರೆ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಹೌದು

ಆ) ವಿದ್ಯುತ್ ಮಾರ್ಗಗಳನ್ನು ಭಾರತೀಯ ವಿದ್ಯುತ್ ಕಾಯ್ದೆ ಅಧಿನಿಯಮದ ಪ್ರಕಾರ ನಿರ್ಮಿಸಲಾಗುತ್ತಿದೆ.

2013–14ನೇ ಸಾಲಿನಲ್ಲಿ ಹಾಗೂ 2014–15ನೇ ಸಾಲಿನ (ನವಂಬರ್ 14ರ ಅಂತ್ಯಕ್ಕೆ) ಆಕಸ್ಮಿಕವಾಗಿ ವಿದ್ಯುತ್ ತಗುಲಿ ಮೃತಪಟ್ಟವರ ವಿವರ ಈ ಕೆಳಗಿನಂತಿವೆ.

ವಿದ್ಯುತ್ ತಗುಲಿ ಮೃತ ಪಟ್ಟವರ ಸಂಖ್ಯೆ			
	ವರ್ಷ 2013–14	**ವರ್ಷ 2014–15 (ನವಂಬರ್–14ರ ಅಂತ್ಯಕ್ಕೆ)**	**ಒಟ್ಟು**
ಬೆಸ್ಕಾಂ	28	26	54
ಕ.ವಿ.ಪ್ರ.ನಿ.ನಿ	1	0	1

ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು ಕೆಳಕಂಡ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ಬೆವಿಕಂನ ಪ್ರಸ್ತುತ ನಿಗದಿತ ದರಪಟ್ಟಿಯ ಅನ್ವಯ ಅಂದಾಜು ಪಟ್ಟಿಯನ್ನು ತಯಾರಿಸಿ, ಸುರಕ್ಷಿತ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ತೆಗೆದುಕೊಳ್ಳಲಾಗುತ್ತಿದೆ.

- ವಿದ್ಯುತ್ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಸುರಕ್ಷತೆಗಾಗಿ 2013–14ನೇ ಸಾಲಿನಲ್ಲಿ, ಬೆಸ್ಕಾಂ ವತಿಯಿಂದ ₹ 10.94 ಕೋಟಿಯಷ್ಟು ವೆಚ್ಚ ಮಾಡಲಾಗಿದೆ.
- ಸುರಕ್ಷತೆಗಾಗಿ, 2014–15ನೇ ಸಾಲಿನಲ್ಲಿ ಬೆಸ್ಕಾಂ ₹ 37 ಕೋಟಿಯಷ್ಟು ಬಜೆಟ್ ಹಂಚಿಕೆ ಮಾಡಿರುತ್ತದೆ.
- ಸುರಕ್ಷತೆ ಬಗ್ಗೆ ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ಜಾಹಿರಾತುಗಳು ಹಾಗೂ ಚಿತ್ರ ಮಂದಿರದಲ್ಲಿ ಸ್ಲೈಡ್ ಮೂಲಕ, ಬಿ.ಎಂ.ಟಿ.ಸಿ ವಾಹನಗಳ ಮೇಲೆ ಫಲಕದ ಮೂಲಕ ಪ್ರದರ್ಶಿಸಲಾಗಿದೆ ಹಾಗೂ ಕರಪತ್ರಗಳಲ್ಲಿ ಸುರಕ್ಷಾ ವಿಷಯಗಳನ್ನು ಮುದ್ರಿಸಿ ಎಲ್ಲಾ ಗ್ರಾಹಕರಿಗೂ ಹಂಚಲಾಗುತ್ತಿದೆ.
- ಶಾಲಾ ಮಕ್ಕಳಿಗೆ ವಿದ್ಯುತ್ ಸುರಕ್ಷತಾ ವಿಧಾನದ ಬಗ್ಗೆ ತಿಳಿ ಹೇಳುವುದಕ್ಕೆ ಸುರಕ್ಷಾ ಕ್ಯಾಂಪ್ ಮಾಡಲಾಗುತ್ತಿದೆ.
- ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅದಕ್ಕೆ ಎ.ಬಿ ಕೇಬಲ್ ಹಾಕಲಾಗುತ್ತಿದೆ, ಜೋತು ಬಿದ್ದ ವಾಹಕಗಳನ್ನು ಸರಿಪಡಿಸುವುದು, ಮಧ್ಯಂತರ ಕಂಬಗಳನ್ನು ಹಾಕುವುದು ಇತ್ಯಾದಿ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1816(756); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ರಾಜ್ಯ ಹೆದ್ದಾರಿ–19 ಹಿರಿಯೂರಿನಿಂದ (ಆರಂಭವಾಗಿ ಎನ್‌ಹೆಚ್‌ಜಿ) ಬಳ್ಳಾರಿ ಮಾರ್ಗವಾಗಿ ಜೇವರ್ಗಿವರೆಗೆ (ಎನ್‌ಹೆಚ್–18) ರಾಷ್ಟ್ರೀಯ ಹೆದ್ದಾರಿಯ 400 ಕಿಮೀ ಲಿಂಕ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;